ಧರ್ಮಸ್ಥಳ : ಜು. 17 : ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ವರ್ಷಂಪ್ರತಿಯಂತೆ ಆಷಾಢ-ಶ್ರಾವಣ ಮಾಸದಲ್ಲಿ ಜರಗುವ ಪುರಾಣ ವಾಚನ-ಪ್ರವಚನ ಕಾರ್ಯಕ್ರಮವು ದಿನಾಂಕ:17-7-2010 ಶನಿವಾರದಂದು ಸಾಯಂ. ಗಂಟೆ 6-30ಕ್ಕೆ ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯ ಪ್ರವಚನ ಮಂಟಪದಲ್ಲಿ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಧರ್ಮಪತ್ನಿ ಶ್ರೀಮತಿ ಹೇಮಾವತಿ ವಿ. ಹೆಗ್ಗಡೆಯವರ ಉಪಸ್ಥಿತಿಯಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟನೆಗೊಂಡಿತು. ಈ ಬಾರಿ ಕನ್ನಡ ಕವಿ ಕುಮಾರವ್ಯಾಸನ "ಕರ್ಣಾಟ ಭಾರತ ಕಥಾ ಮಂಜರಿ" ಪುರಾಣ ಗ್ರಂಥ ಹಾಗೂ ಪ್ರತಿ ಶನಿವಾರದಂದು ಆಯ್ದ ಕನ್ನಡ ಕಾವ್ಯಗಳನ್ನು ವಾಚನ-ಪ್ರವಚನಕ್ಕೆ ಹಮ್ಮಿಕೊಳ್ಳಲಾಗಿದೆ.

ಉಜಿರೆ ಶ್ರೀ ಧ. ಮ. ಕಾಲೇಜಿನ ಸಂಸ್ಕೃತ ಉಪನ್ಯಾಸಕರಾದ ಡಾ. ಇ. ಮಹಾಬಲ ಭಟ್ ಪ್ರವಚನಕಾರರಾಗಿ ಹಾಗೂ ಶ್ರೀ ಜಯರಾಮ ಕುದ್ರೆತ್ತಾಯ ವಾಚನಕಾರರಾಗಿ ಭಾಗವಹಿಸಿದರು.

ಕಾರ್ಯಕ್ರಮದ ಸಂದರ್ಭ ಸ್ಥಳೀಯ ವಿದ್ವಾಂಸರುಗಳು ಉಪಸ್ಥಿತರಿದ್ದರು.